


I am CHILDLINE Dost. Are you?

CHILD LINE 1098 NIGHT & DAY

## ಚೈಲ್ಡ್‌ಲೈನ್-1098 ಮಂಗಳೂರು

# ಚೈಲ್ಡ್‌ಲೈನ್ ಸೆ ದೋಸ್ತಿ ಸಪ್ತಾಹ

**(ನವೆಂಬರ್ 14 ರಿಂದ ನವೆಂಬರ್ 20, 2018ರ ವರೆಗೆ)**

### ಚೈಲ್ಡ್‌ಲೈನ್–ಪರಿಚಯ–

ಚೈಲ್ಡ್‌ಲೈನ್-1098, ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಯಾಗಿದ್ದು ರಕ್ಷಣೆ ಮತ್ತು ಪೋಷಣೆಯ ಅಗತ್ಯತೆಯಲ್ಲಿ ಇರುವ ಮಕ್ಕಳಿಗಾಗಿ ಇಪ್ಪತ್ತನಾಲ್ಕು ಗಂಟೆಗಳ ಉಚಿತ, ತುರ್ತು ದೂರವಾಣಿ ಹಾಗೂ ಹೊರಸಂಪರ್ಕ ಸೇವೆಯನ್ನು ನೀಡುತ್ತಿದೆ. ಭಾರತದಾದ್ಯಂತ ಮಕ್ಕಳ ಸಹಾಯಕ್ಕಾಗಿ ಇರುವಂತಹ ಏಕೈಕ ಸಹಾಯವಾಣಿ ಇದಾಗಿದೆ. 1996ರಲ್ಲಿ ಈ ಯೋಜನೆ ಆರಂಭಗೊಂಡಿದ್ದು ಪ್ರಸ್ತುತ ಭಾರತದಾದ್ಯಂತ ಚೈಲ್ಡ್‌ಲೈನ್ ಕೇಂದ್ರಗಳು ಸ್ಥಾಪನೆಗೊಂಡಿದೆ.

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ (ಸಿ.ಐ.ಎಫ್) ಸಂಸ್ಥೆಯನ್ನು ನೋಡಲ್ ಏಜನ್ಸಿಯನ್ನಾಗಿ ಮಾಡಿದೆ.

ಚೈಲ್ಡ್‌ಲೈನ್ ಅಂಚಿನಲ್ಲಿರುವ ಮಕ್ಕಳಿಗೆ ಆಘಾತಕಾರಿ ಪರಿಸ್ಥಿತಿಗಳಿಂದ ರಕ್ಷಣೆ ಮತ್ತು ಪುನರ್ವಸತಿ ಸೇವೆಯನ್ನು ಒದಗಿಸಿಕೊಡುವಲ್ಲಿ ಕಾರ್ಯಪ್ರವೃತ್ತವಾಗಿದೆ. ಬೀದಿ ಬದಿಯ ಮಕ್ಕಳು, ಬಾಲ ಕಾರ್ಮಿಕರು, ಕುಟುಂಬ, ಶಾಲೆ ಅಥವಾ ಸಂಸ್ಥೆಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ಪೋಷಕರಿಂದ ದೂರವಾದ ಮಕ್ಕಳು, ಅಪಘಾತಕ್ಕೆ ತುತ್ತಾದ ಹಾಗೂ ನಾನಾ ಕಾರಣಗಳಿಂದ ಸಂಕಷ್ಟಕ್ಕೆ ಸಿಲುಕಿ ಭಾವನಾತ್ಮಕ, ಬೆಂಬಲ ಮತ್ತು ಮಾರ್ಗದರ್ಶನ ಬಯಸುತ್ತಿರುವ ಮಕ್ಕಳಿಗೆ ನೆರವನ್ನು ನೀಡುವ ಕಾರ್ಯವನ್ನು ಚೈಲ್ಡ್‌ಲೈನ್ ಮಾಡುತ್ತಿದೆ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಚೈಲ್ಡ್‌ಲೈನ್ ಕಾರ್ಯಾಚರಿಸುತ್ತಿದೆ.

**<u>ಮಂಗಳೂರು ಚೈಲ್ಡ್‌ಲೈನ್:</u>**

2001ರಲ್ಲಿ ಮಂಗಳೂರಿನಲ್ಲಿ ಚೈಲ್ಡ್‌ಲೈನ್ ಸೇವೆ ಆರಂಭಗೊಂಡಿದ್ದು, "ಸ್ಕೂಲ್ ಆಫ್ ಸೋಶಿಯಲ್ ವರ್ಕ್, ರೋಶನಿ ನಿಲಯ" ನೋಡಲ್ ಏಜನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಜೊತೆಗೆ "ಪಡಿ" ಸಂಸ್ಥೆಯು ಕೊಲಾಬ್ ಏಜನ್ಸಿಯಾಗಿ 2012 ರಿಂದ ಕಾರ್ಯಾಚರಿಸುತ್ತಿದೆ.



ಚೈಲ್ಡ್‌ಲೈನ್ ಸೇವೆಯು ಎರಡು ರೀತಿಯ ಮಾದರಿಯನ್ನು ಹೊಂದಿದೆ. ನಗರ ಮಾದರಿ (ಅರ್ಬನ್ ಮೊಡೆಲ್) ಹಾಗೂ ಗ್ರಾಮ ಮಾದರಿ (ರೂರಲ್ ಮೊಡೆಲ್). ನಗರ ಮಾದರಿಯಲ್ಲಿ ಒಂದು ನೋಡೆಲ್, ಒಂದು ಕೊಲಾಬ್ ಅಥವಾ ಕೇವಲ ಕೊಲಾಬ್ ಏಜನ್ಸಿ ಕಾರ್ಯಚರಿಸುತ್ತದೆ ಹಾಗೂ ಇದು ಕೇವಲ ನಗರ ವಲಯಕ್ಕೆ ಸೀಮಿತವಾಗಿರುತ್ತದೆ. ಗ್ರಾಮ ಮಾದರಿಯಲ್ಲಿ ನೋಡಲ್, ಕೊಲಾಬ್ ಏಜನ್ಸಿಯ ಜೊತೆಗೆ ಸಬ್ ಸೆಂಟರ್‌ಗಳು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ಸೇವೆ ನೀಡುತ್ತವೆ. ಚೈಲ್ಡ್‌ಲೈನ್ ಮಂಗಳೂರು ನಗರ ಮಾದರಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಐದು ತಾಲೂಕುಗಳನ್ನು ಒಳಗೊಂಡಿದ್ದು ಮಂಗಳೂರು ನಗರವು ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ನಗರ ಮಾದರಿಯನ್ನು ಹೊಂದಿರುವ ಚೈಲ್ಡ್‌ಲೈನ್ ಮಂಗಳೂರು ನಗರ ಪ್ರದೇಶಕ್ಕೆ ಸೀಮಿತವಾಗಿದ್ದರೂ ದಕ್ಷಿಣ ಕನ್ನಡದಾದ್ಯಂತ ಮಕ್ಕಳ ಸಮಸ್ಯೆಗಳ ಕುರಿತು ಕರೆಗಳು ಬರುತ್ತಲೇ ಇರುತ್ತವೆ. ಬೆಳೆಯುತ್ತಿರುವ ನಗರವಾದ ಮಂಗಳೂರಿನಲ್ಲಿ ಮಕ್ಕಳ ಸಮಸ್ಯೆಗಳ ಸರಮಾಲೆಯೆ ಇದೆ. ಭಿಕ್ಷಾಟನೆಯಲ್ಲಿ ನಿರತವಾದ ಮಕ್ಕಳು, ಶಿಕ್ಷಣದಿಂದ ವಂಚಿತವಾದ ಮಕ್ಕಳು, ನಗರ ಪ್ರದೇಶದ ಆಕರ್ಷಣೆ, ಒತ್ತಡ ಅಥವಾ ಕೌಟುಂಬಿಕ ಸಮಸ್ಯೆಗೆ ಒಳಗಾಗಿ ಊರು ಬಿಟ್ಟು ಬರುವಂತಹ ಮಕ್ಕಳು, ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ಬಾಲ್ಯ ವಿವಾಹ, ಬಾಲ ಕಾರ್ಮಿಕತೆ, ಮಕ್ಕಳ ಮಾರಾಟ ಸಾಗಾಟ, ಮನೆ, ಶಾಲೆ ಅಥವಾ ಇತರ ಪ್ರದೇಶಗಳಲ್ಲಿ ಮಕ್ಕಳ ಮೇಲೆ ದೈಹಿಕ ಅಥವಾ ಮಾನಸಿಕ ಹಿಂಸೆ, ವಸತಿ, ವೈದ್ಯಕೀಯ ನೆರವು, ಭಾವನಾತ್ಮಕ ಬೆಂಬಲ ಮತ್ತು ಮಾರ್ಗದರ್ಶನ ಬಯಸುವ ಮಕ್ಕಳು, ನಾಪತ್ತೆಯಾದ ಮಕ್ಕಳು ಹೀಗೆ ಹತ್ತು ಹಲವು ರೀತಿಯಲ್ಲಿ ಮಕ್ಕಳ ಸಮಸ್ಯೆಗಳಿಗಾಗಿ ದಕ್ಷಿಣ ಕನ್ನಡದಾದ್ಯಂತ ಕರೆಗಳು 1098 ಸಂಖ್ಯೆಗೆ ಬರುತ್ತಲೇ ಇರುತ್ತವೆ. ದಕ್ಷಿಣ ಭಾರತದ ಯಾವುದೇ ಭಾಗದಿಂದಲೂ 1098 ಕ್ಕೆ ಮಾಡುವಂತಹ ಕರೆಗಳು ಚೆನ್ನೈನಲ್ಲಿರುವ ಕೇಂದ್ರೀಕೃತ ಸಂಪರ್ಕ ಕೇಂದ್ರ (ಸೆಂಟ್ರಲಾಯಿಸ್ಡ್ ಕಾಂಟ್ಯಾಕ್ಟ್ ಸೆಂಟರ್) ಕ್ಕೆ ರವಾನೆಯಾಗಿ ಅಲ್ಲಿಂದ ಸಂಬಂಧಪಟ್ಟ ಜಿಲ್ಲೆಯ ಚೈಲ್ಡ್‌ಲೈನ್ ಕಛೇರಿಗೆ ಸಮಸ್ಯೆಯ ಕುರಿತು ಮಾಹಿತಿ ನೀಡಲಾಗುತ್ತದೆ.

**ಚೈಲ್ಡ್‌ಲೈನ್ ಕೊಲಾಬ್ ಏಜನ್ಸಿ ಕಾರ್ಯವೈಖರಿ:**

ಚೈಲ್ಡ್‌ಲೈನ್‌ಗೆ ಮಕ್ಕಳ ಸಮಸ್ಯೆಗಳ ಕುರಿತು ಕರೆಗಳು ಬಂದಾಗ ಚೈಲ್ಡ್‌ಲೈನ್ ಕೊಲಾಬ್ ಏಜನ್ಸಿಯಲ್ಲಿರುವ ಕೇಂದ್ರ ಸಂಯೋಜಕರು ಆ ಪ್ರಕರಣಕ್ಕೆ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿಯನ್ನು ನೀಡುತ್ತಾರೆ. ಹಾಗೂ ಚೈಲ್ಡ್‌ಲೈನ್ ತಂಡ ಸದಸ್ಯರನ್ನು ಮಕ್ಕಳ ರಕ್ಷಣೆ ಮತ್ತು ಪೋಷಣೆಯ ಸಲುವಾಗಿ ಸ್ಥಳಕ್ಕೆ ಕಳುಹಿಸಿ ಕೊಡುತ್ತಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೋಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ ಹೀಗೆ ಸಂಬಂಧಪಟ್ಟ ಇಲಾಖೆಗಳ ಸಹಯೋಗದೊಂದಿಗೆ ಚೈಲ್ಡ್‌ಲೈನ್ ಮಕ್ಕಳ ರಕ್ಷಣೆಗೆ ಸಹಕರಿಸುತ್ತದೆ. ಮಕ್ಕಳನ್ನು ರಕ್ಷಿಸಿದ ನಂತರ ಆ ಮಕ್ಕಳನ್ನು "ಮಕ್ಕಳ ಕಲ್ಯಾಣ ಸಮಿತಿ"ಗೆ ಸೂಕ್ತ ಪುನರ್ವಸತಿಗಾಗಿ ಹಾಜರುಪಡಿಸಲಾಗುತ್ತದೆ. ಮಕ್ಕಳ ಕಲ್ಯಾಣ ಸಮಿತಿಯು ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಬೇಕಾದಂತಹ ವ್ಯವಸ್ಥೆಯನ್ನು ನೀಡುವ ಒಂದು ಸಮಿತಿಯಾಗಿದೆ.

**ಚೈಲ್ಡ್‌ಲೈನ್ ನೋಡಲ್ ಏಜನ್ಸಿ ಕಾರ್ಯವೈಖರಿ:**

ಚೈಲ್ಡ್‌ಲೈನ್ ನೋಡಲ್ ಏಜನ್ಸಿಯು ವಿವಿಧ ಇಲಾಖೆಗಳ ಜೊತೆ ವಕಾಲತ್ತು, ಸಂಯೋಜನೆಯನ್ನು, ದಾಖಲೀಕರಣ ಮಾಡುತ್ತದೆ. ಚೈಲ್ಡ್‌ಲೈನ್ 1098 ಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು ಅವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ಸಭೆಯನ್ನು ನೋಡಲ್ ಏಜನ್ಸಿಯು ಆಯೋಜಿಸುತ್ತದೆ. ಇದಲ್ಲದೆ ಕೊಲಾಬ್ ಏಜನ್ಸಿಗೆ ಬೇಕಾದಂತಹ ಸಹಕಾರ, ತರಬೇತಿ, ಇಲಾಖಾಮಟ್ಟದ ತರಬೇತಿಗಳನ್ನು ನೋಡಲ್ ಏಜನ್ಸಿಯು ಆಯೋಜಿಸುತ್ತದೆ.



## ಚೈಲ್ಡ್‌ಲೈನ್ ಮಂಗಳೂರಿಗೆ ಬಂದ ಕರೆಗಳ ವಿವರ:

ಕಳೆದ ಐದು ವರುಷಗಳಲ್ಲಿ ಮಕ್ಕಳ ಸಮಸ್ಯೆಗಳ ಕುರಿತು ಚೈಲ್ಡ್‌ಲೈನ್ ಮಂಗಳೂರಿಗೆ ಬರುವ ಕರೆಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ಹಲವು ಮಕ್ಕಳಿಗೆ ರಕ್ಷಣೆ ಮತ್ತು ಪೋಷಣೆ ನೀಡುವುದು

ಸಾಧ್ಯವಗಿದೆ. ವಿವಿಧ ಇಲಾಖೆಗಳ ಸಹಯೋಗ, ಸಾರ್ವಜನಿಕರ ಸಹಕಾರ, ಮಾಧ್ಯಮದವರ ಸ್ಪಂದನೆಯ ಮೂಲಕ ಮಕ್ಕಳ ಸಮಸ್ಯೆಗಳನ್ನು ಪತ್ತೆ ಹಚ್ಚಿ ಮಕ್ಕಳಿಗೆ ರಕ್ಷಣೆ ಕೊಡುವಲ್ಲಿ ಮಹತ್ತರ ಪಾತ್ರವಹಿಸುತ್ತಿದೆ.

ಕಳೆದ 2012- 2017ರ ವರೆಗಿನ ಕರೆಗಳ ಅಂಕಿಅಂಶ ಇಂತಿದೆ:

| ಇಸವಿ- | ಮಕ್ಕಳ ರಕ್ಷಣೆ ಮತ್ತು ಪೋಷಣೆಗೆ ಸಂಬಂಧಿಸಿ ಬಂದ ಕರೆಗಳು |
|---|---|
| 2013 - | 231 |
| 2014- | 272 |
| 2015- | 519 |
| 2016- | 497 |
| 2017- | 604 |
| ಒಟ್ಟು | 2123 |

**ಸವಾಲುಗಳು:**

ಚೈಲ್ಡ್‌ಲೈನ್ ಸೇವೆಯ ಕುರಿತು ದಕ್ಷಿಣ ಕನ್ನಡದಾದ್ಯಂತ ಜಾಗೃತಿ ಮೂಡಿಸಲು ಹಾಗೂ ಇತರೆ ತಾಲೂಕುಗಳಿಂದ ಬರುವ ಕರೆಗಳಿಗೆ ತುರ್ತು ಸ್ಪಂದನೆ ನೀಡಲು ದಕ್ಷಿಣ ಕನ್ನಡದ ಇತರೆ ತಾಲೂಕುಗಳಲ್ಲಿ ಚೈಲ್ಡ್‌ಲೈನ್ ಸಬ್ ಸೆಂಟರ್‌ಗಳ ಅಗತ್ಯವಿದೆ. ಬೇರೆ ತಾಲೂಕಿನಿಂದ ಬರುವ ಕರೆಗಳಿಗೆ ತತ್‌ಕ್ಷಣ ಸ್ಪಂದಿಸಲು ವಿವಿಧ ತಾಲೂಕುಗಳಲ್ಲಿರುವ ಚೈಲ್ಡ್‌ಲೈನ್ ಸ್ವಯಂಸೇವಕರು, ವಿವಿಧ ಇಲಾಖೆಗಳ ಸಿಬ್ಬಂದಿಗಳ ಸಹಕಾರ ಪಡೆಯಲಾಗುತ್ತಿದ್ದರೂ ತಾಲೂಕುಮಟ್ಟದಲ್ಲಿ ಚೈಲ್ಡ್‌ಲೈನ್ ಸಬ್‌ಸೆಂಟರ್‌ಗಳು ಇದ್ದಲ್ಲಿ ಇನ್ನೂ ಉತ್ತಮ ಸೇವೆ ನೀಡುವಲ್ಲಿ ಸಹಕಾರಿಯಾಗುತ್ತದೆ. ಸ್ವಂತ ವಾಹನ ಸೌಲಭ್ಯ, ತಾಲೂಕು ಮಟ್ಟದ ಸಬ್ ಸೆಂಟರ್‌ಗಳು ಚೈಲ್ಡ್‌ಲೈನ್‌ಗೆ ಇಂದಿನ ಸವಾಲಾಗಿದೆ. ಇವುಗಳ ಒದಗಿಸುವಿಕೆಯು ಈ ಜಿಲ್ಲೆಯಲ್ಲಿ ಚೈಲ್ಡ್‌ಲೈನ್ ಇನ್ನೂ ತುರ್ತು ಹಾಗೂ ಸಮಗ್ರ ರಕ್ಷಣೆಯನ್ನು ಮಕ್ಕಳಿಗೆ ನೀಡುವಲ್ಲಿ ಸಾಧ್ಯವಾಗುತ್ತದೆ.

## ಧ್ಯೇಯ-

- ಚೈಲ್ಡ್‌ಲೈನ್ 1098 ಮಕ್ಕಳ ಸ್ನೇಹಿ ಸಮಾಜದ ಹಕ್ಕುಗಳು ಮತ್ತು ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವುದು.
- ಚೈಲ್ಡ್‌ಲೈನ್ 1098 ಎನ್ನುವುದು ಸದಾ ಸ್ನೇಹಿ ಅಕ್ಕನಂತೆ ಮತ್ತು ಕರುಣಾಮಯಿ ಅಣ್ಣನಂತೆ ದಿನದ 24 ಗಂಟೆಯು ವರ್ಷದ 365 ದಿನಗಳು ಅವಶ್ಯಕತೆಯುಳ್ಳ ಮಕ್ಕಳಿಗೆ ನೆರವು ನೀಡಲು ಸದಾ ಸಿದ್ಧವಾಗಿದೆ.
- ಭಾರತದಲ್ಲಿ ಚೈಲ್ಡ್‌ಲೈನ್ ದೂರವಾಣಿ ಸಂಖ್ಯೆಯು ಅದೆಷ್ಟೋ ಮಿಲಿಯನ್ ಮಕ್ಕಳಿಗೆ 24 ಗಂಟೆಯ ಉಚಿತ ಕರೆಯ ಸೇವೆಯನ್ನು ನೀಡಿ ಅವಶ್ಯಕತೆಯುಳ್ಳ ಮಕ್ಕಳಿಗೆ ಸಹಾಯ ಮಾಡಿ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತಿದೆ.
- ಒಂದು ವೇಳೆ ಮಕ್ಕಳು ಅಥವಾ ಪ್ರೌಢಾವಸ್ಥೆಯಲ್ಲಿರುವವರು ಸಮಸ್ಯೆಯಿಂದ ಬಳಲುತಿದ್ದಲ್ಲಿ ಅಥವಾ ಚೈಲ್ಡ್‌ಲೈನ್ ಸೇವೆಯ ಅವಶ್ಯಕತೆಯಿರುವವರು 1098ನ್ನು ಸಂಪರ್ಕಿಸಬಹುದು.

- ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಲ ಅಭಿವೃದ್ಧಿ ಇಲಾಖೆ ದೂರ ಸಂವಹನ ಇಲಾಖೆ,ಸ್ವಯಂ ಸೇವಾ ಸಂಸ್ಥೆಗಳು,ಪ್ರಸ್ತುತ ಸಮೂಹ ಸಂಸ್ಥೆಗಳು ಮತ್ತು ಕಾರ್ಪೋರೇಟ್ ವಿಭಾಗಕ್ಕೆ ಸಂಬಂಧಿಸಿದ ವ್ಯಕ್ತಿಗಳು ಮಕ್ಕಳ ಸಹಾಯವಾಣಿಯ ತಳಹದಿಯಾಗಿರುತ್ತಾರೆ.
- ನಾವು ಮಕ್ಕಳ ರಕ್ಷಣೆಗೆ ದುಡಿಯುತ್ತೇವೆ.ಆದರೆ ವಿಶೇಷ ಗಮನವನ್ನು ಅವಶ್ಯಕತೆಯುಳ್ಳ ಮಕ್ಕಳ ಕಾಳಜಿ ಮತ್ತು ರಕ್ಷಣೆಗಾಗಿ ನೀಡುತ್ತೇವೆ.

**ಚೈಲ್ಡ್ ಲೈನ್-1098 ರ ಕಾರ್ಯಕ್ರಮಗಳು-**

1) **ಶಾಲಾ ಜಾಗೃತಿ ಕಾರ್ಯಕ್ರಮಗಳು:**



ಚೈಲ್ಡ್‌ಲೈನ್-1098, ಮಕ್ಕಳ ಹಕ್ಕುಗಳು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಪೊಕ್ಸೊ ಕಾಯ್ದೆ-2012, ಸ್ವರಕ್ಷಣಾ ವಿಧಾನ, ಬಾಲ್ಯ ವಿವಾಹ, ಮಕ್ಕಳ ರಕ್ಷಣೆಗಿರುವ ವ್ಯವಸ್ಥೆಗಳು ಮುಂತಾದವುಗಳ ಬಗ್ಗೆ ಶಾಲೆಗಳಲ್ಲಿ ಮಕ್ಕಳಿಗೆ ಮಾಹಿತಿ ನೀಡಲಾಗುತ್ತದೆ.

2) **ಸಾಮೂಹಿಕ ಜಾಗೃತಿ:**



ನಗರ ಪ್ರದೇಶ ಮತ್ತು ಹೊರವಲಯಗಳಲ್ಲಿ ನಾಗರೀಕರಿಗೆ ಚೈಲ್ಡ್‌ಲೈನ್ ಸೇವೆಯ ಬಗ್ಗೆ ಸಾಮೂಹಿಕ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಮುಖ್ಯವಾಗಿ ಹೆತ್ತವರು, ಸ್ವ-ಸಹಾಯ ಸಂಘದ ಸದಸ್ಯರು, ಶಿಕ್ಷಕರು, ಆರಕ್ಷಕರು, ಇತರೆ ಅಧಿಕಾರಿಗಳು ಮುಂತಾದವರಿಗೆ ಮಕ್ಕಳ ರಕ್ಷಣೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

3) **ಹೊರಸಂಪರ್ಕ ಸೇವೆ:**

ಚೈಲ್ಡ್‌ಲೈನ್ ಸೇವೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಚೈಲ್ಡ್‌ಲೈನ್ ತಂಡ ಸದಸ್ಯರು ಹೊರಸಂಪರ್ಕ ಸೇವೆಯನ್ನು ನಗರದಾದ್ಯಂತ ಕೈಗೊಳ್ಳುತ್ತಾರೆ. ಬಸ್ಸು ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ, ಅಟೋ ಚಾಲಕರಿಗೆ, ಸಮುದಾಯದ ಸ್ವ-ಸಹಾಯ ಗುಂಪು, ಯುವ ಬಳಗ ಮುಂತಾದ ಕಡೆ ಮಾಹಿತಿ ನೀಡಲಾಗುತ್ತದೆ. ಈ ಸೇವೆಯ ಮುಖ್ಯ ಉದ್ದೇಶ ಸಾಕಷ್ಟು ಸಂಖ್ಯೆಯಲ್ಲಿ ಜನರನ್ನು ತಲುಪಿ ಅವರಿಗೆ ಚೈಲ್ಡ್‌ಲೈನ್ ಸೇವೆಯ ಅರಿವು ಮೂಡಿಸುವುದು ಹಾಗೂ ಆದಷ್ಟು ಜನರು ಚೈಲ್ಡ್‌ಲೈನ್ ಕಾರ್ಯಕರ್ತರಾಗಿ ನಮ್ಮೊಂದಿಗೆ ಕೈಜೋಡಿಸಿ ಮಕ್ಕಳ ರಕ್ಷಣೆಯಲ್ಲಿ ತೊಡಗುವಂತೆ ಮಾಡುವುದು ಮತ್ತು ಮಕ್ಕಳ ಹಕ್ಕು, ಮಕ್ಕಳ ರಕ್ಷಣೆಯ ಬಗೆಗಿನ ಮಾಹಿತಿ ಕರಪತ್ರ, ಭಿತ್ತಿ ಪತ್ರ ಹಂಚುವುದು.



4) **ತೆರೆದ ಮನೆ:**

ತೆರೆದ ಮನೆ ಕಾರ್ಯಕ್ರಮವು ನಗರದ ವಿವಿಧ ವಾರ್ಡುಗಳಲ್ಲಿ ನಡೆಯುವ ಚೈಲ್ಡ್‌ಲೈನ್ ಕಾರ್ಯಚಟುವಟಿಕೆ. ಸ್ಥಳೀಯ ಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಸಮಾಜ ಸೇವಾ ಕಾರ್ಯಕರ್ತರು ಜೊತೆಗೂಡಿ ಮಕ್ಕಳು ಮತ್ತು ಸಮುದಾಯದ ಜನರಿಗೆ ಮಾಹಿತಿ ನೀಡಿ ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸುವ ವಿನೂತನ ಕಾರ್ಯಕ್ರಮ.



### 5) ಸಾಮರ್ಥ್ಯಾಭಿವೃದ್ಧಿ ತರಬೇತಿ:

ಚೈಲ್ಡ್‌ಲೈನ್ ಸಿಬ್ಬಂದಿಗಳಿಗೆ ಬಾಲ ನ್ಯಾಯ ಕಾಯ್ದೆ, ಮಕ್ಕಳ ಹಕ್ಕುಗಳ ಕ್ಲಬ್, ಮಾದಕ ವ್ಯಸನ ಮತ್ತು ಅದರ ಪರಿಣಾಮಗಳು ಹಾಗೂ ಜೀವನ ಕೌಶಲ್ಯಗಳ ಕುರಿತು ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡಲಾಯಿತು. ಮಕ್ಕಳ ರಕ್ಷಣೆಯ ಕಾರ್ಯದಲ್ಲಿ ಸಿಬ್ಬಂದಿಗಳ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವ ಉದ್ದೇಶವನ್ನು ಈ ತರಬೇತಿ ಹೊಂದಿದೆ.

### 6) ಚೈಲ್ಡ್‌ಲೈನ್ ಸಯಂ ಸೇವಕರ ಸಭೆ:

ಪ್ರತೀ 6 ತಿಂಗಳಿಗೊಮ್ಮೆ ನಡೆಯುವಂತಹ ಸಭೆಯಾಗಿದ್ದು, ಚೈಲ್ಡ್‌ಲೈನ್ ಗೆ ಸಹಕಾರ ನೀಡುಂತಹ ಸದಸ್ಯರು ಮತ್ತು ಆಸಕ್ತರು ಈ ಮೇಲಿನ ಸಭೆಯಲ್ಲಿ ಹಾಜರಿರುತ್ತಾರೆ. ಮತ್ತು ಅವರಿಗೆ ಮತ್ತಷ್ಟ ಚೈಲ್ಡ್‌ಲೈನ್‌ನ ಕುರಿತು ಮಾಹಿತಿ ನೀಡಲಾಗುತ್ತದೆ.

### 7) ಚೈಲ್ಡ್‌ಲೈನ್ ಸಲಹಾ ಸಮಿತಿ ಸಭೆ:

ಪ್ರತೀ 6 ತಿಂಗಳಿಗೊಮ್ಮೆ ವಿವಿಧ ಇಲಾಖೆಗಳ ನೇತೃತ್ವದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಯುವಂತಹ ಸಭೆಯಾಗಿದ್ದು, ಚೈಲ್ಡ್‌ಲೈನ್‌ಗೆ ಸಹಕಾರ ನೀಡುವಂತಹ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಪೋಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಜಿಲ್ಲಾಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಸರ್ಕಾರಿ ಬಾಲಕರ ಬಾಲಮಂದಿರದ ಅಧೀಕ್ಷಕರು, ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಸಿಬ್ಬಂದಿಗಳು ಈ ಸಭೆಯಲ್ಲಿ ಹಾಜರಿರುತ್ತಾರೆ. ಚೈಲ್ಡ್‌ಲೈನ್ 6 ತಿಂಗಳ ವರದಿಯನ್ನು ಪ್ರಸ್ತುತಪಡಿಸಲಾತ್ತದೆ. ಚೈಲ್ಡ್‌ಲೈನ್ ಮುಂದಿನ ಯೋಜನೆಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಲಾಗುತ್ತದೆ.






# ಚೈಲ್ಡ್‌ಲೈನ್ ಸೆ ದೋಸ್ತಿ ಸಪ್ತಾಹ




**'ಚೈಲ್ಡ್‌ಲೈನ್ ಸೆ ದೋಸ್ತಿ'** ಎನ್ನುವುದು ಒಂದುವಾರದ (ನವೆಂಬರ್ 14 ರಿಂದ 20) ರಾಷ್ಟ್ರೀಯ ಆಂದೋಲನವಾಗಿದೆ.ಇದರ ಗುರಿಯು ಸಾಮಾನ್ಯ ನಾಗರಿಕರನ್ನು ಮತ್ತು ಫಲಾನುಭಾವಿಗಳನ್ನು ಚೈಲ್ಡ್‌ಲೈನ್‌ನ-1098ರಲ್ಲಿ ಭಾಗವಹಿಸುವಂತೆ ಮಾಡುವುದು.

- ಈ ಅಭಿಯಾನವು ದೇಶದಾದ್ಯಂತ ನಡೆಯುವ ಅನೇಕ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ಒಳಗೊಂಡಿದೆ.
- ಚೈಲ್ಡ್‌ಲೈನ್ ಸೇ ದೋಸ್ತಿಯ ಕಾರ್ಯ ವ್ಯಕ್ತಿಯು ಯಾವುದೇ ವೃತ್ತಿಯಲ್ಲಿದ್ದರೂ ಮಕ್ಕಳ ಸಹಾಯವಾಣಿಯ ಬಗ್ಗೆ ತಿಳಿಸಿಕೊಂಡು ಮಕ್ಕಳಿಗೆ ರಕ್ಷಣೆ ಕೊಡಲು ಮುಂದೆ ಬರುವಂತೆ ಮಾಡುವುದು.
- ಈ ಅಭಿಯಾನದ ಮುಖ್ಯ ಉದ್ದೇಶವು ಜನರಲ್ಲಿ ಚೈಲ್ಡ್‌ಲೈನ್ ಕುರಿತು ಅರಿವನ್ನು ಮೂಡಿಸುವುದಾಗಿದೆ.
- ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗೆ ಚೈಲ್ಡ್‌ಲೈನ್ ತನ್ನ ಸಹಾಯಹಸ್ತವನ್ನು ಚಾಚುತ್ತದೆ.
- ನೀವು ಚೈಲ್ಡ್‌ಲೈನ್‌ನ ದೋಸ್ತಿ ಆಗಬೇಕಿದ್ದಲ್ಲಿ ನಿಮ್ಮ ಸುತ್ತಮುತ್ತಲಿನ ಆಗುಹೋಗುವುಗಳನ್ನು ಗಮನಿಸಿಕೊಂಡು ಮತ್ತು ಮಕ್ಕಳಿಗೆ ಅವಶ್ಯಕತೆಯಿದ್ದಲ್ಲಿ ಕ್ರಮಕೈಗೊಳ್ಳು ಚೈಲ್ಡ್‌ಲೈನ್-1098ಕ್ಕೆ ತಿಳಿಸುವುದು.
- ನೀವು ಮಕ್ಕಳ ರಕ್ಷಣೆಯಲ್ಲಿ ಚೈಲ್ಡ್‌ಲೈನ್ ನ ರಾಯಭಾರಿಯಾಗಬಹುದು.

## ಚೈಲ್ಡ್‌ಲೈನ್ ದೋಸ್ತಿಗಾಗಿ ನನ್ನ ಪ್ರತಿಜ್ಞೆ

ನಾನು ಸಂಕಷ್ಟದಲ್ಲಿರುವ ಮಕ್ಕಳಿಗಾಗಿ ೧೦೯೮ಲಕ್ಕೆ ಕರೆ ಮಾಡುತ್ತೇನೆ.
ನಾನು ಮಕ್ಕಳ ಮೇಲೆ ಹಿಂಸೆ ನಡೆಯುತ್ತಿದ್ದರೆ ಪ್ರತಿಭಟಿಸುತ್ತೇನೆ
ನಾನು ಮಕ್ಕಳು ಹಿಂಸೆಗೊಳಗಾಗಿ ದೌರ್ಜನ್ಯ ಪೀಡಿತರಾದರೆ,ಅದರ ವಿರುದ್ಧ ದ್ವನಿ ಎತ್ತುತ್ತೇನೆ.
ನಾನು ಮಕ್ಕಳನ್ನು ಪ್ರೀತಿ ಆದರದಿಂದ ಕಂಡು ಅವರ ಘನತೆ ಗೌರವವನ್ನು ಕಾಪಾಡಿ" ಮಕ್ಕಳ ಸಹಾಯವಾಣಿಯ ದೋಸ್ತಿ" ಎಂಬುದನ್ನು ಸಾಬೀತು ಪಡಿಸುತ್ತೇನೆ.



# ಚೈಲ್ಡ್‌ಲೈನ್ ಮಂಗಳೂರು–1098

## ಚೈಲ್ಡ್‌ಲೈನ್ ಸೆ ದೋಸ್ತಿ ಸಪ್ತಾಹ–2018

### 2018ನೇ ನವೆಂಬರ್ 14ರಿಂದ 20ರ ವರೆಗೆ

### ಕಾರ್ಯಕ್ರಮಗಳ ವೇಳಾಪಟ್ಟಿ

| ದಿನಾಂಕ | ಕಾರ್ಯಕ್ರಮ | ಸ್ಥಳ | ಸಮಯ | ಉಪಸ್ಥಿತಿ |
|---|---|---|---|---|
| 14/11/2018 | ಉಧ್ಘಾಟನೆ ಕಾರ್ಯಕ್ರಮ, | ನೇತ್ರಾವತಿ ಸಭಾಂಗಣ ಜಿಲ್ಲಾಪಂಚಾಯತ್ | ಪೂ-11.30 | ಜಿಲ್ಲಾಧಿಕಾರಿಯವರು,<br>ನ್ಯಾಯಾದೀಶರು,ಕಾನೂನು ಸೇವೆಗಳ ಪ್ರಾಧಿಕಾರ,<br>ಪೋಲೀಸ್ ಆಯುಕ್ತರು,<br>ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,<br>ಮಕ್ಕಳ ಕಲ್ಯಾಣ ಸಮಿತಿ,<br>ಜಿಲ್ಲಾಮಕ್ಕಳ ರಕ್ಷಣಾಧಿಕಾರಿಯವರು,<br>ಶಿಕ್ಷಣ ಸಂಪನ್ಮೂಲ ಕೇಂದ್ರ |
| 15/11/2018 | ಬಾಲಭಿಕ್ಷಾಟನೆ ನಿಷೇಧ ಕುರಿತು ಅರಿವು ಕಾರ್ಯಕ್ರಮ, ಕರಪತ್ರ ಹಂಚುವಿಕೆ | ಸೆಂಟ್ರಲ್ ರೈಲ್ವೇ,<br>ಸೆಂಟ್ರಲ್ ಮಾರ್ಕೆಟ್ | ಅ-3.30 | ಕೇಂದ್ರ ಹಾಗೂ ನಗರ ಸಂಯೋಜಕರು ಮತ್ತು ತಂಡ ಸದಸ್ಯರು,<br>ಪೋಲೀಸ್ ಇಲಾಖೆ,<br>ಜಿಲ್ಲಾಮಕ್ಕಳ ರಕ್ಷಣಾ ಘಟಕ,<br>ಶಿಕ್ಷಣ ಸಂಪನ್ಮೂಲ ಕೇಂದ್ರ. |
| 16/11/2018 | ಆನ್‌ಲೈನ್ ಸೇಫ್ಟಿ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಅರಿವು ಕಾರ್ಯಕ್ರಮ, ಹಾಗೂ ಶಾಲಾ ಮಕ್ಕಳಿಂದ ಮೌನ ಜಾತಾ | ಗಣಪತಿ ಹೈಸ್ಕೂಲ್ ಕಾರ್‌ಸ್ಟ್ರೀಟ್ | ಪೂ-11.00 | ಸೈಬರ್ ಕ್ರೈಂ ಪೋಲೀಸ್ ಅಧಿಕಾರಿಗಳು,<br>ಜಿಲ್ಲಾಮಕ್ಕಳ ರಕ್ಷಣಾಧಿಕಾರಿಯವರು,<br>ಚೈಲ್ಡ್ ಲೈನ್-1098 ಮಂಗಳುರು |
| 17/11/2018 | ವಿವಿಧ ಸ್ಥಳಗಳಿಗೆ ತೆರಳಿ ಬಾಲಕಾರ್ಮಿಕ ಪದ್ದತಿ ನಿಷೇಧ ಕುರಿತು ಅರಿವು ಕಾರ್ಯಕ್ರಮ,ಕರಪತ್ರ ಹಂಚುವಿಕೆ | ನಗರದ ಹಂಪನಕಟ್ಟೆ,ಜ್ಯೋತಿ, ಬಲ್ಮಠ, ಕಾರ್‌ಸ್ಟ್ರೀಟ್, ಸ್ಟೇಟ್‌ಬ್ಯಾಂಕ್, ಬಂದರ್, ದಕ್ಕೆ, ಲಾಲ್‌ಬಾಗ್ ಇನ್ನಿತರ ಸ್ಥಳಗಳಲ್ಲಿ ವಿವಿಧ ಹೊಟೇಲ್,ಗ್ಯಾರೇಜು, ಕಾರ್ಖಾನೆಗಳು, ಪ್ಲಾಟ್‌ಗಳು | ಪೂ-10.30 | ಕಾರ್ಮಿಕ ಇಲಾಖಾ ಅಧಿಕಾರಿಗಳು,<br>ಜಿಲ್ಲಾಮಕ್ಕಳ ರಕ್ಷಣಾ ಘಟಕ ಹಾಗೂ ಚೈಲ್ಡ್‌ಲೈನ್ |
| 18/11/2018 | ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕ ಮಾಹಿತಿ | ಕೆ.ಎಸ್.ಆರ್.ಟಿ.ಸಿ ಮಂಗಳುರು | ಅ-2.30 | ಚೈಲ್ಡ್‌ಲೈನ್, ಪೋಲೀಸ್ ಇಲಾಖೆ,<br>ಜಿಲ್ಲಾಮಕ್ಕಳ ರಕ್ಷಣಾ ಘಟಕ. |

| | | | | |
|---|---|---|---|---|
| | ಕಾರ್ಯಕ್ರಮ ಹಾಗೂ ಕೈ ಬೆರಳಿನ ಉಗುರಿಗೆ ಬಿಳಿ ಬಣ್ಣ ಲೇಪನ ಮಾಡುವ ಮೂಲಕ ನಾನು ಲೈಂಗಿಕ ದೌರ್ಜನ್ಯವನ್ನು ವಿರೋಧಿಸುತ್ತೇನೆ ಎಂಬುದಾಗಿ ಮಾಹಿತಿ ನೀಡುವುದು. | | | |
| 19/11/2018 | 6 ಠಾಣೆಯ ಸ್ಥಳಿಯ ಶಾಲೆಯ 30 ಮಕ್ಕಳ ಜೊತೆ ಠಾಣಾ ಭೇಟಿ ಮಾಡುವುದು ಹಾಗೂ ಮಕ್ಕಳಿಗೆ ಮಗು ಸ್ನೇಹಿ ಪೋಲೀಸ್ ಕುರಿತು ಮಾಹಿತಿ ನೀಡುವುದು ಹಾಗೂ ಸುರಕ್ಷಾ ಬಂಧನವನ್ನು ಮಕ್ಕಳು ಪೋಲೀಸರ ಕೈಗೆ ಕಟ್ಟುವಿಕೆ | 1. ಕಂಕನಾಡಿ ಪೋಲೀಸ್ ಠಾಣೆ<br>2. ಪಾಂಡೇಶ್ವರ ಪೋಲೀಸ್ ಠಾಣೆ,<br>3. ಕದ್ರಿ ಪೋಲೀಸ್ ಠಾಣೆ,<br>4. ಊರ್ವ ಪೋಲೀಸ್ ಠಾಣೆ.<br>5. ಬರ್ಕೆ ಪೋಲೀಸ್ ಠಾಣೆ,<br>6. ಬಂದರ್ ಪೋಲೀಸ್ ಠಾಣೆ | ಪೂ.10.30 | ಪೋಲೀಸ್ ಇಲಾಖೆ,ಜಿಲ್ಲಾಮಕ್ಕಳ ರಕ್ಷಣಾ ಘಟಕ, ಚೈಲ್ಡ್‌ಲೈನ್ |
| 20/11/2018 | ಲಯನ್ಸ್ ವಿಶೇಷ ಮಕ್ಕಳ ಶಾಲೆ ಸುರತ್ಕಲ್ ಇಲ್ಲಿಗೆ ತೆರಳಿ ಮಕ್ಕಳಿಗೆ ವಿವಿಧ ಕಾರ್ಯಕ್ರಮಗಳನ್ನು ಮಾಡುವುದು | ಲಯನ್ಸ್ ವಿಶೇಷ ಮಕ್ಕಳ ಶಾಲೆ ಸುರತ್ಕಲ್ | ಪೂ-10.30 | ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,ಜಿಲ್ಲಾಮಕ್ಕಳ ರಕ್ಷಣಾಧಿಕಾರಿಗಳು, ಸ್ಥಳೀಯ ಪೋಲೀಸ್ ಅಧಿಕಾರಿಗಳು ಹಾಗೂ ಚೈಲ್ಡ್ ಲೈನ್,ಶಿಕ್ಷಣ ಸಂಪನ್ಮೂಲ ಕೇಂದ್ರ. |
| 21/11/2018 | ಮಕ್ಕಳಿಗೆ ಮಕ್ಕಳ ಹಕ್ಕುಗಳ ಕುರಿತು ಪ್ರಬಂಧ ಸ್ಪರ್ದೆ ಹಾಗೂ ಅಪರಾಹ್ನ ಪ್ರಸಸ್ತಿ ವಿತರಣೆ ಹಾಗೂ ಕಾರ್ಯಕ್ರಮದ ಮುಕ್ತಾಯ. | ಸೈಂಟ್ ಆನ್ಸ್ ಶಾಲೆ ಸ್ಟೇಟ್‌ಬ್ಯಾಂಕ್ | ಪೂ-10 | ನ್ಯಾಯಾದೀಶರು, ಕಾನೂನು ಸೇವೆಗಳ ಪ್ರಾಧಿಕಾರ,<br>ಪೋಲೀಸ್ ಆಯುಕ್ತರು,<br>ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,<br>ಮಕ್ಕಳ ಕಲ್ಯಾಣ ಸಮಿತಿ,<br>ಪೋಲೀಸ್ ಇಲಾಖೆ, ಚೈಲ್ಡ್‌ಲೈನ್ |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**


**ನೋಡಲ್ ಏಜೆನ್ಸಿ :**

ನೋಡಲ್ ಸಂಯೋಜಕರು
ಸ್ಕೂಲ್ ಆಫ್ ಸೋಶಿಯಲ್ ವರ್ಕ್
ರೋಶನಿ ನಿಲಯ
ಮಂಗಳೂರು-575002
ದೂರವಾಣಿ : 0824-2437878
ಮೋ.ಸಂಖ್ಯೆ:9964025875

**ಸಹಭಾಗಿ ಸಂಸ್ಥೆ:**

ಕೇಂದ್ರ ಸಂಯೋಜಕರು
ಚೈಲ್ಡ್‌ಲೈನ್ ಮಂಗಳೂರು-1098(ಪಡಿ)
ಕೊಲೊಸೊ ಆಸ್ಪತ್ರೆ ಬಳಿ,ಬೆಂದೂರ್‌ವೆಲ್
ಮಂಗಳೂರು-575002
ದೂರವಾಣಿ : 0824-2438895
ಮೊ.ಸಂಖ್ಯೆ:8139942038